

# ಬಿಡುಗಡೆ

ಚೀನಾದಲ್ಲಿ ಒಬ್ಬ ರಾಜ
ಇದ್ದನಂತಲ್ಲ
ಅವನಿಗೆ ಪಾರಿವಾಳಗಳೆಂದರೆ ಪಂಚಪ್ರಾಣ
ವಷ್ಟೇ ಅಲ್ಲ, ಅಪಾರ ಕರುಣೆ
ವರ್ಷವರ್ಷವೂ ಹೊಸ ವರ್ಷ ಪ್ರಾರಂಭವಾದ ದಿನ ಅವನು
ಅರಮನೆಯ ಉಪ್ಪರಿಗೆಯಿಂದ ಹಾರಿಸಿಬಿಡುತ್ತಿದ್ದ
ಸಹಸ್ರ ಸಹಸ್ರ ಸಹಸ್ರ ಪಾರಿವಾಳಗಳನ್ನು

ಅವನ ಆ ಸಂಭ್ರಮಕ್ಕೆಂದೇ ಆ ದೇಶದ ಜನರು
ವರ್ಷವಿಡೀ ಊರು ಕೇರಿ ಕಾಡು ಮೇಡು ಅಲೆದು ಬಲೆಬೀಸಿ
ಒಂದು ಪಾರಿವಾಳವನ್ನೂ ಬಿಡದೆ ಹಿಡಿದು ಹಿಡಿದು
ಪಂಜರಗಳಿಗೆ ತುಂಬಿ ತುಂಬಿ ತಂದೊಪ್ಪಿಸುತ್ತಿದ್ದರು

ರಾಜನ ಕೈಯಿಂದ ಹಾರಿಹೋಗುತ್ತಿದ್ದ ಪಾರಿವಾಳಗಳಿಗೆ
ಹೋಲಿಸಿದರೆ ಸೆರೆಸಿಕ್ಕಾಗ ಕುತ್ತಿಗೆಯೋ ಕಾಲೋ ರೆಕ್ಕೆಯೋ
ಮುರಿದು ಸಾಯುತ್ತಿದ್ದ ಪಾರಿವಾಳಗಳ ಸಂಖ್ಯೆ?

ಹಯ್ಯೋ, ಅದೇನು ಬಿಡಿ ಜುಜುಬಿ

● **ಎಸ್. ದಿವಾಕರ್**
ಕಲೆ: ಡಿ.ಕೆ. ರಮೇಶ್